# ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಚಿತ್ತಾಪೂರ

ಓ ಎಸ್ ನಂಃ **110/2017**

**ಪಿ.ಡಬ್ಲ್ಯೂಃ 3,** ಮಹೇಶ

| | | |
|---|---|---|
| ಹೆಸರು | : | ಮಹೇಶ |
| ತಂದೆಯ ಹೆಸರು | : | ಬಸವಣ್ಣಪ್ಪಾ |
| ವಯಸ್ಸು | : | **49** ವರ್ಷ |
| ಉದ್ಯೊಗ | : | ಆರೋಗ್ಯ ಸಹಾಯಕ |
| ವಾಸಸ್ಥಳ | : | ಸೂಗೂರ (ಕೆ) ಆರೋಗ್ಯ ಕೇಂದ್ರ, |

---

ದಿನಾಂಕ : **06-10-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಮುಖ್ಯ ವಿಚಾರಣೆ :- ಶ್ರೀ ಎಸ್ ಎಸ್ ಎ ವಕೀಲರಿಂದ:

ನಾನು ಈ ದಿನ ನ್ಯಾಯಾಲಯದಿಂದ ಬಂದ ಸಮನ್ಸ ಮೇರೆಗೆ ಸಾಕ್ಷಿ ನೀಡಲು ಬಂದಿರುತೇನೆ.

ನಾನು ಈಗ ಸೂಗೂರ (ಕೆ) ಆರೋಗ್ಯ ಕೇಂದ್ರದಲ್ಲಿ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಕಳೆದ ಸುಮಾರು 19 ವರ್ಷಗಳಿಂದ ಆರೋಗ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಮೂಲತ: ಕಾಳಗಿ ಗ್ರಾಮದವನು. ಗುಂಡಮ್ಮ ಗಂಡ ಅಪ್ಪಾರಾವ ಮಾಲಿ ಪಾಟೀಲ ಕಾಳಗಿಯವರು ನನಗೆ ಪರಿಚಯ ಇದ್ದರು. ಅವರು ಈಗ ಜೀವಂತ ಇಲ್ಲಾ. ಈಗ 25 ವರ್ಷಗಳಿಂದ ಅವರು ನನಗೆ ಪರಿಚಯ ಇದ್ದು ಅವರು ಮಾಡಿದ ಕಾಗದ ಪತ್ರದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇಲ್ಲಾ. ಆದರೆ ಸಹಿ ಮಾಡಿದ್ದು ನೆನಿಪಿದೆ, ವ್ಯವಹಾರ ನೆನೆಪಿಲ್ಲಾ ಕಾಗದ ತೋರಿಸಿದರೆ ನನ್ನ ಸಹಿ ಗುರುತಿಸುತ್ತೇನೆ. ನಾನು ಸಹಿ ಮಾಡಿದ್ದು ಒಂದೇ ಕಾಗದಕ್ಕೆ ಎಂದು ಹೇಳುತ್ತಾರೆ. ಆ ದಿನ ಕಾಗದ್ಕಕೆ ಸಹಿ ಮಾಡಿದಾಗ ಬೇರೆ ಯಾರು ಇರಲಿಲ್ಲಾ ನಾನು ಒಬ್ಬನೇ ಇದ್ದೇನು ಎಂದು ಹೇಳುತ್ತಾರೆ. ಕಾಗದಕ್ಕೆ ಕಾಳಗಿ ಗ್ರಾಮದಲ್ಲಿ ಸಹಿ ಮಾಡಿರುತ್ತೇನೆ. ನಾನು ಕಟಗಿ ಅಡ್ಡೆಯಲ್ಲಿ ಕಾಳಗಿಯಲ್ಲಿ ಸಹಿ ಮಾಡಿದ್ದು ಬಿಟ್ಟರೆ ಬೇರೆ ಎಲ್ಲೂ ಸಹಿ ಮಾಡಿಲ್ಲಾ. ಸಾಕ್ಷಿ ಈಗ ನಿಪಿ-1 ದಾಖಲೆಯನ್ನು ನೋಡಿ ಅದರಲ್ಲಿ ಎರಡು ಕಡೆ ತನ್ನ ಸಹಿ ಇದೆ ಎಂದು ಗುರುತಿಸಿದ್ದು ಸದರಿ ಸಹಿಗಳನ್ನು ನಿಪಿ-1(ಬಿ) ಮತ್ತು (ಸಿ) ಎಂದು ಗುರುತಿಸಲಾಯಿತು. ಅದರಲ್ಲಿ ಏನು ಬರೆದಿದೆ ಎಂಥು ನನಗೆ ಗೊತ್ತಿಲ್ಲಾ ನನಗೆ ಇಂಗ್ಲೀಷ ಓದಲು ಬರೆಯಲು ಬರುವುದಿಲ್ಲಾ. ಅದನ್ನು ಯಾರು ನನಗೆ ಓದಿ ಹೇಳಿಲ್ಲಾ. ನಾನು ಪಿ.ಯು.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಕನ್ನಡ ಮಾಧ್ಯಮದಲ್ಲಿ ಓದಿರುತ್ತೇನೆ.

( ಈ ಹಂತದಲ್ಲಿ ಸಾಕ್ಷಿಯು ವಾದಿ ವಿರುದ್ಧವಾಗಿ ಸಾಕ್ಷಿ ನುಡಿಯುತ್ತಿದ್ದು ಆದ್ದರಿಂದ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ನೀಡಬೇಕೆಂದು ವಕೀಲರು ಕೋರಿದ್ದು, ಅದನ್ನು ಮನ್ನಿಸಿ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು. )



ಪಾಟಿ ಸವಾಲು : ಶ್ರೀ ಎಸ್ ಎಸ್ ಎ ವಕೀಲರಿಂದ:

ಸದರಿ ನಿಪಿ-1 ದಾಖಲೆಯು ಗುಂಡಮ್ಮ ಇವರು ವಾದಿಯ ತಂದೆಯಾದ ಜಯಶಂಕರ ಇವರಿಗೆ ದಾವಾ ಸ್ವತ್ತುಗಳು ಹೋಗಬೇಕೆಂದು ಬರೆದುಕೊಟ್ಟ ಮೃತ್ಯ ಪತ್ರ ಎಂದರೆ ಸಾಕ್ಷಿ ಸಹಿ ಬಿಟ್ಟು ಬೇರೆ ಏನು ಗೊತ್ತಿಲ್ಲಾ ಎಂದು ಹೇಳುತ್ತಾರೆ. ಆ ದಿನ ನನ್ನ ಜೊತೆ ಮಡೆಪ್ಪ ಮತ್ತು ಭೀಮಯ್ಯ ವಡ್ಡರ ಇವರು ಸಹ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಕಾಗದಕ್ಕೆ ಗುಂಡಮ್ಮ ಇವರೇ ಮಾಹಿತಿ ಕೊಟ್ಟು ಎಸ್.ಟಿ ಪಾಟೀಲ ವಕಿಲರು ಮಾಹಿತಿ ತಯಾರಿಸಿದ್ದು ಅದನ್ನು ಸಬ್ ರಜಿಸ್ಟರ್ ಕಚೇರಿಯಲ್ಲಿ ನಮಗೆ ಎಲ್ಲರಿಗೂ ಓದಿ ಹೇಳಿದ ನಂತರ ಗುಂಡಮ್ಮ ನನ್ನ ಸಮಕ್ಷಮ ಹೆಬ್ಬಟ್ಟು ಒತ್ತಿದ್ದು ನಂತರ ನಾವು ಸಹ ಅದನ್ನು ಓದಿಸಿ ತಿಳಿದುಕೊಂಡು ಸಹಿ ಮಾಡಿದ್ದೇವೆ ಎಂದರೆ ಸಾಕ್ಷಿ ಇಲ್ಲಾ ಎಂದು ಹೇಳುತ್ತಾರೆ. ನಾನು ಸಬ್ ರಜಿಸ್ಟರ್ ಕಛೆರಿಯಲ್ಲಿ ನಿಪಿ-1 (ಬಿ) ಮತ್ತು (ಸಿ) ಸಹಿಗಳನ್ನು ಮಾಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನಿಪಿ-1 ಕಾಗದ ಪತ್ರಕ್ಕೆ ಗುಂಡಮ್ಮ ಮಾಹಿತಿ ನೀಡಿ ತಯಾರಿಸಿದ್ದು ಈ ವಿಚಾರ ನನಗೆ ಗೊತ್ತಿದ್ದೂ ಸಹಿ ಮಾಡಿದ್ದರೂ ಸಹ ಈಗ 1 ನೇ ಪ್ರತಿವಾದಿ ಮಾತು ಕೇಳಿ ಅವರಿಗೆ ಸಹಾಯ ಮಾಡಲು ಕಾಳಗಿಯಲ್ಲಿ ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೆನೆಂದರೆ ಸರಿಯಲ್ಲ.

ಅದೇ ರೀತಿ ಗುಂಡಮ್ಮ 2 ಪ್ಲಾಟ್ ಮಾರಿದ್ದು ಆ ಕಾಗದಕ್ಕೂ ನಾನು ಸಾಕ್ಷಿಯಾಗಿ ಸಹಿ ಮಾಡಿದ್ದು ಅದನ್ನು ಸಹ ಸಬ್ ರಜಿಸ್ಟರ್ ಕಛೆರಿಯಲ್ಲಿ ಮಾಡಿದ್ಧೇನೆ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿಗೆ ನಿಪಿ-20 ದಾಖಲೆ ತೋರಿಸಿದಾಗ ಸಾಕ್ಷಿ ಅದರಲ್ಲಿ ತನ್ನ ಸಹಿ ಇದೆ ಎಂದು ಒಪ್ಪುತ್ತಾರೆ. ಗುಂಡಮ್ಮ ವಿಲ್ ಮಾಡಿಕೊಟ್ಟ ಮಾಹಿತಿ ನನಗೆ ಇದ್ದರೂ ಸಹ ಉದ್ದೇಶಪೂರ್ವಕವಾಗಿ ಸಹಿ ಮಾತ್ರ ಮಾಡಿದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ

ಪಾಟಿ ಸವಾಲು : ಶ್ರೀಮತಿ. ಎಮ್ ವಿ ಎಲ್ ವಕೀಲರಿಂದ:

ನಾನು ಕಟಗಿ ಅಡ್ಡೆಯಲ್ಲಿ ಸಹಿ ಮಾಡಿದಾಗ ಕಾಗದವನ್ನು ಜಯಶಂಕರ ತಂದಿದ್ದರು. ನಾನು ಆ ಸಮಯದಲ್ಲಿ ಜಯಶಂಕರ ಹತ್ತಿರ ಕಾಳಗಿಯಲ್ಲಿ ಕೆಲಸ ಮಾಡುತ್ತಿದ್ದೆ. ಜಯಶಂಕರ ಇವರು ವಾದಿಯ ತಂದೆ .

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಚಿತ್ತಾಪೂರ.